

# ವೈರಲ್ ಜಿಲ್ಲಾಧಿಕಾರಿಯ ಸಮಾಜಮುಖಿ ಚಿತ್ರಣ

**ಸಾಮಾಜಿಕ ಜಾಲತಾಣಗಳಲ್ಲಿ ಈಚೆಗೆ ಐಎಎಸ್ ಅಧಿಕಾರಿಯೊಬ್ಬರ ಫೋಟೊಗಳು ದಿಢೀರನೆ ವೈರಲ್ ಆಗಿದ್ದವು. ಕುತೂಹಲಕ್ಕೆ ಅವರತ್ತ ಇಣುಕಿದಾಗ ಕಂಡಿದ್ದು, ಅವರೊಳಗಿನ ಸಮಾಜಮುಖಿ ಚಿತ್ರಣಗಳು.**

**■ ಶಶಿಕುಮಾರ್ ಸಿ.**

ಅದೊಂದು ಪ್ರೋಟೊಕಾಲ್ ಅಷ್ಟೇ. ಶಿಸ್ತುಬದ್ಧ ಪಾಲನೆ ಆ ಅಧಿಕಾರಿಯ ಕರ್ತವ್ಯದ ಭಾಗ. ಅದನ್ನು ಕ್ರಮಬದ್ಧವಾಗಿ ಪಾಲಿಸಿದ ಕಾರಣಕ್ಕಾಗಿ ಅವರೀಗ ದೇಶದಾದ್ಯಂತ ವೈರಲ್ ಕಂಟೆಂಟ್ ಆಗಿದ್ದಾರೆ. ಕಂಟೆಂಟ್ ಆದವರು ಜಿಲ್ಲಾಧಿಕಾರಿ. ಪ್ರಾಮಾಣಿಕತೆ, ದಕ್ಷತೆ ಹಾಗೂ ಸಮಾಜಮುಖಿ ಕಾರ್ಯವೈಖರಿಯ ಜೊತೆಗೆ ಅವರ ಸೌಂದರ್ಯವು ವೈರಲ್ ಆಗಲು ಕಾರಣ ಎನ್ನಬಹುದು. ಯಾರವರು ಅಂತೀರಾ... ಅವರೇ, ಅರುಣಾಚಲ ಪ್ರದೇಶದ ಪಾಪಂ ಪಾರೆ ಜಿಲ್ಲಾಧಿಕಾರಿ ವಿಶಾಖ ಯಾದವ್.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಪ್ರಧಾನಿ ನರೇಂದ್ರ ಮೋದಿ ಈಚೆಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದರು. ಅಲ್ಲಿನ ಪಾಪಂ ಪಾರೆ ಜಿಲ್ಲೆಯ ಹೊಲೊಂಗಿ ವಿಮಾನ ನಿಲ್ದಾಣ (Hollongi Airport) ಎಂದೂ ಕರೆಸಿಕೊಳ್ಳುವ ಡೊನ್ಯಿ ಪೊಲೊ ವಿಮಾನ ನಿಲ್ದಾಣಕ್ಕೆ (Donyi Polo Airport) ಪ್ರಧಾನಿ ಭೇಟಿ ಕೊಟ್ಟಿದ್ದರು. ಅವರನ್ನು ಸರ್ಕಾರದ ಪ್ರಮುಖರ ಜೊತೆಗೆ ಅಲ್ಲಿನ ಜಿಲ್ಲಾಧಿಕಾರಿ ವಿಶಾಖ ಯಾದವ್ ಸ್ವಾಗತಿಸಿದ್ದರು.

ಪ್ರಧಾನಿಯನ್ನು ಸ್ವಾಗತಿಸಿದ ಕ್ಷಣಗಳನ್ನು ಅಲ್ಲಿದ್ದವರು ಕ್ಲಿಕ್ಕಿಸಿದ್ದರು. ಆ ಪೈಕಿ ವಿಶಾಖ ಅವರು ಪ್ರಧಾನಿ ಅವರನ್ನು ಸ್ವಾಗತಿಸುತ್ತಿರುವ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಆ ಫೋಟೊಗಳು ಇಡೀ ದೇಶದಾದ್ಯಂತ ವೈರಲ್ ಆಗಿವೆ. ಕೋಟ್ಯಂತರ ನೆಟ್ಟಿಗರು ಇಂಟರ್‌ನೆಟ್‌ನಲ್ಲಿ ಜಿಲ್ಲಾಧಿಕಾರಿ ಬಗ್ಗೆ ಹುಡುಕಾಡುತ್ತಿದ್ದು, ಪ್ರಧಾನಿ ಸ್ವಾಗತಿಸಿದ ಪರಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ತನ್ನ ಸೌಂದರ್ಯದಿಂದಷ್ಟೇ ಫೋಟೊಗಳು ವೈರಲ್ ಆಗಿವೆ ಎನ್ನುವುದನ್ನು ಸಾರಾಸಗಟಾಗಿ ತಳ್ಳಿಹಾಕುವಂತಿದೆ ವಿಶಾಖ ಯಾದವ್ ಅವರ ದಕ್ಷತೆ ಹಾಗೂ ಕಾರ್ಯವೈಖರಿ. ಚಿಕ್ಕ ವಯಸ್ಸಿಗೆ ಐಎಎಸ್ ಹುದ್ದೆಗೇರಿದರೂ ಅವರ ಚಿತ್ತ ಸಮಾಜದ ಕಟ್ಟಕಡೆಯ ವ್ಯಕ್ತಿಯೆಡೆಗೆ ಎನ್ನುವುದನ್ನು ಸಾರಿ ಹೇಳುತ್ತಿವೆ ಅವರ ಟ್ರ್ಯಾಕ್ ರೆಕಾರ್ಡ್.

### ಕಡಿಮೆ ಅವಧಿಯಲ್ಲಿ ವಿಶ್ವಾಸ

ಕಳೆದ ಜೂನ್ 9ರಂದು ಜಿಲ್ಲಾಧಿಕಾರಿಯಾಗಿ, ಕಡಿಮೆ ಅವಧಿಯಲ್ಲೇ ಜನಪರ ಕಾರ್ಯಕ್ರಮಗಳನ್ನು ಕೊಟ್ಟು ಜನರ ವಿಶ್ವಾಸಗಳಿಸಿದ್ದಾರೆ. ತಮ್ಮ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ನಡೆಸುತ್ತಿರುವ ಅವರು ಅದಕ್ಕಾಗಿ ಬೈಕ್ ರ್‍ಯಾಲಿ, ಸುರಕ್ಷತಾ ಪ್ರತಿಜ್ಞೆ ಮತ್ತು ಸುರಕ್ಷತಾ ಸಾಧನಗಳ ವಿತರಣೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಗ್ರಾಮೀಣ ಆಡಳಿತವನ್ನು ಬಲಪಡಿಸಲು ಪಂಚಾಯತ್ ಸದಸ್ಯರಿಗೆ ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸಲು ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರಗಳನ್ನೂ ಸ್ಥಾಪಿಸಿ ಶಿಬಿರಗಳನ್ನು ಆಯೋಜಿಸುತ್ತಿದ್ದಾರೆ.



ಅಕ್ರಮ ಗಣಿಗಾರಿಕೆ, ಒತ್ತುವರಿ ಮತ್ತು ಪಾರೆ ಜಲ ವಿದ್ಯುತ್ ಯೋಜನೆಯ ಮೇಲೆ ಪರಿಣಾಮ ಬೀರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿರುವ ಅವರು ಆಡಳಿತದ ಮೇಲೆ ಬಿಗಿ ಹಿಡಿತ ಹೊಂದಿದ್ದಾರೆ. ಈ ಸಂಬಂಧ ನೀಪ್ಕೊ (NEEPCO) ಅಧಿಕಾರಿಗಳೊಂದಿಗೆ ಪಾರೆ ಜಲ ವಿದ್ಯುತ್ ಕೇಂದ್ರಕ್ಕೆ ಭೇಟಿ ನೀಡಿ, ನೀಪ್ಕೊದ ಸಿದ್ಧತಾ ಕ್ರಮಗಳನ್ನು ಪರಿಶೀಲಿಸಿ, ಸ್ಥಳೀಯರ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡ ವಿಧಾನವು ಅವರ ಮೇಲಿನ ಜನರ ವಿಶ್ವಾಸ ಹೆಚ್ಚಿದೆ.

### ವಿಶಾಖಗಿದೆ ಬೆಂಗಳೂರಿನ ನಂಟು

ವೈರಲ್ ಕಂಟೆಂಟ್ ಆಗಿರುವ ವಿಶಾಖ ಅವರಿಗೆ ಬೆಂಗಳೂರಿನ ನಂಟಿದೆ. ಹೌದು, ಅವರು ದೆಹಲಿಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (DTU) ಎಂಜಿನಿಯರಿಂಗ್ ಕೋರ್ಸ್ ಮುಗಿಸಿದ ನಂತರ ಬೆಂಗಳೂರಿನ ಸಿಸ್ಕೊ ಕಂಪನಿಯಲ್ಲಿ ಎರಡು ವರ್ಷ ಕೆಲಸ ಮಾಡಿದ್ದರು. ಕೆಲಸದಲ್ಲಿ ತೊಡಗಿಕೊಂಡೇ ಯುಪಿಎಸ್‌ಸಿ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದ ಅವರು, ಹೆಚ್ಚಿನ ಓದಿಗಾಗಿ ಕೆಲಸ ಬಿಟ್ಟಿದ್ದರು. ತರಬೇತಿ ಹಾಗೂ ಕೋರ್ಸ್‌ಗಳಲ್ಲಿ ಪಾಲ್ಗೊಳ್ಳದೆ ಐಎಎಸ್ ಆದ ಹೆಗ್ಗಳಿಕೆ ಅವರದ್ದು.

### ರಾಷ್ಟ್ರ ಪ್ರಶಸ್ತಿ ವಿಜೇತ ಅಧಿಕಾರಿ

ಸರ್ಕಾರಿ ಅಧಿಕಾರಿಯಾದ ನಾಲ್ಕು ವರ್ಷಗಳಲ್ಲೇ ಸಾರ್ವಜನಿಕ ಆಡಳಿತದ ಶ್ರೇಷ್ಠತೆಗಾಗಿ ನೀಡುವ ಪ್ರಧಾನಮಂತ್ರಿ ಪ್ರಶಸ್ತಿ ಪಡೆದಿದ್ದು ವಿಶಾಖ ಅವರ ಕರ್ತವ್ಯನಿಷ್ಠೆಗೆ ಹಿಡಿದ ಕನ್ನಡಿಯಾಗಿದೆ. ಪಾಪಂ ಪಾರೆಯ ಜಿಲ್ಲಾಧಿಕಾರಿಯಾಗುವ ಮುನ್ನ ಅವರು ದೂರದ ಗಡಿ ಹಳ್ಳಿಗಳಲ್ಲಿ ಡಿಜಿಟಲ್ ಅಂತರವನ್ನು ಕಡಿಮೆ ಮಾಡುವ ಯೋಜನೆಯಾದ 'ಪ್ರಾಜೆಕ್ಟ್ ಡಿಜಿ ಕಕ್ಷಾ'ದಲ್ಲಿ ತೊಡಗಿಸಿಕೊಂಡಿದ್ದರು. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದ ಕಾರಣಕ್ಕೆ ಅವರಿಗೆ 2024ರಲ್ಲಿ 'ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆ'ಗಾಗಿ ಪ್ರಧಾನಮಂತ್ರಿ ಪ್ರಶಸ್ತಿಯು ಸಿಕ್ಕಿತ್ತು. ಜೊತೆಗೆ ಚುನಾವಣೆಯ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿದ್ದಕ್ಕಾಗಿಯೂ ಅರುಣಾಚಲ ಪ್ರದೇಶದ ಚುನಾವಣಾ ಆಯೋಗವು ನೀಡುವ 'ಅತ್ಯುತ್ತಮ ಚುನಾವಣಾ ಅಭ್ಯಾಸ ರಾಜ್ಯ ಪ್ರಶಸ್ತಿ' (Best Electoral Practices Award) ಪಡೆದಿದ್ದಾರೆ.

### ದೇಶಕ್ಕೆ 6ನೇ ರ್‍ಯಾಂಕ್

1994ರಲ್ಲಿ ಹುಟ್ಟಿದ ವಿಶಾಖ ಯಾದವ್ ಮೂಲತಃ ದೆಹಲಿಯ ನಿವಾಸಿ. ತಂದೆ ರಾಜಕುಮಾರ್ ಯಾದವ್. ವೃತ್ತಿಯಲ್ಲಿ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ಆಗಿದ್ದಾರೆ. ತಾಯಿ ಸರಿತಾ ಯಾದವ್. ತನ್ನ ಮೊದಲೆರಡು ಪ್ರಯತ್ನಗಳಲ್ಲಿ ಪ್ರಾಥಮಿಕ ಪರೀಕ್ಷೆಯನ್ನೂ ಪಾಸಾಗದ ವಿಶಾಖ ಮೂರನೆಯ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 6ನೇ ರ್‍ಯಾಂಕ್ ಗಳಿಸಿದ್ದಾರೆ. 2025 ಅಂಕಗಳಿಗೆ ಅವರು 1,046 ಅಂಕಗಳನ್ನು ಗಳಿಸಿದ್ದರು. ■